ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ: 76/2024**

ಪ್ರ.ವ.ಬೋ.ತಾಃ 05-11-2025

ಚಾಸಾಃ 1 ಫ್ರಾಸಾಃ 1

| | |
|---|---|
| ಸಾಕ್ಷಿಯ ಹೆಸರು | ರಾಮಕೃಷ್ಣಯ್ಯ |
| ತಂದೆ/ಗಂಡನ ಹೆಸರು | ರಾಮಯ್ಯ |
| ವಯಸ್ಸು | 42 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಹುಣಸವಾಡಿ, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

1 ನೇ ಆರೋಪಿ ನನ್ನ ಅಣ್ಣ, 2 ಮತ್ತು 3 ನೇ ಆರೋಪಿತರು ನನ್ನ ಅಣ್ಣನ ಮಕ್ಕಳುಗಳು, 4 ನೇ ಆರೋಪಿ ನನ್ನ ಅತ್ತಿಗೆ, 5 ನೇ ಆರೋಪಿ ಸಂಬಂಧಿಕರು. ಚಾಸಾ.2 ನನ್ನ ಅಣ್ಣ. ಚಾಸಾ.3 ನನ್ನ ಹೆಂಡತಿ. ಚಾಸಾ.4 ನನ್ನ ಅಕ್ಕ. ಉಳಿದ ಸಾಕ್ಷಿದಾರರು ಗೊತ್ತು. ಕಳೆದ ಒಂದೂವರೆ ವರ್ಷದ ಹಿಂದೆ 1 ನೇ ಆರೋಪಿ ತಮ್ಮ ಜಮೀನಿನ ಬಳಿ ನಮ್ಮ ತಂದೆಯ ಆಸ್ತಿಯಲ್ಲಿ ಭಾಗ ಕೊಡುತ್ತೇನೆ ಎಂದು ಹೇಳಿ ಮಧ್ಯಾಹ್ನ 2.00 ಗಂಟೆ ಸಮಯದಲ್ಲಿ ಕರೆದುಕೊಂಡು ಹೋದರು. ಆ ಸಮಯದಲ್ಲಿ ಚಾಸಾ.2 ರವರು ಆರೋಪಿತರನ್ನು ಉದ್ದೇಶಿಸಿ ಮಾರಾಟ ಮಾಡಿದ ಜಮೀನಿನಲ್ಲಿ ಹಣ ಕೊಡುವಂತೆ ಕೇಳಿದರು. ಆಗ ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಅಲ್ಲೆ ಬಿದ್ದಿದ್ದ ಬೇವಿನ ಮರದ

ಚಕ್ಕೆಯಿಂದ 1 ನೇ ಆರೋಪಿ ಚಾಸಾ.2 ರವರ ತಲೆಗೆ ಹಲ್ಲೆ ಮಾಡಿದರು. ಇದರಿಂದ ರಕ್ತ ಬರುತ್ತಿತ್ತು. 2 ನೇ ಆರೋಪಿ ಮಚ್ಚಿನಿಂದ ಚಾಸಾ.2 ರವರ ಎಡಗೈಗೆ ಹಲ್ಲೆ ಮಾಡಿದರು. 5 ನೇ ಆರೋಪಿ ದೊಣ್ಣೆಯಿಂದ ಚಾಸಾ.2 ರವರಿಗೆ ಮೈ ಕೈಗೆ ಹೊಡೆದರು. ನಂತರ ನಾನು ಗಲಾಟೆ ಬಿಡಿಸಲು ಹೋದಾಗ ನನಗೂ ಸಹ 3 ನೇ ಆರೋಪಿ ಹೊಡೆಯಲು ಬಂದರು. ಗಲಾಟೆ ಬಿಡಿಸಲು ಬಂದ ಚಾಸಾ.3 ರವರಿಗೆ 1 ಮತ್ತು 2 ನೇ ಆರೋಪಿತರು ಮೈಕೈಗೆ ಹೊಡೆದು ನೋವುಂಟುಪಡಿಸಿದರು. ನಂತರ 4 ನೇ ಆರೋಪಿ ಗಲಾಟೆ ಬಿಡಿಸಲು ಬಂದ ಚಾಸಾ.4 ರವರ ಕಪಾಳಕ್ಕೆ ಹೊಡೆದು ತಲೆ ಕೂದಲನ್ನು ಹಿಡಿದು ಎಳೆದಾಡಿದರು. ಈ ಗಲಾಗೆಯನ್ನು ಚಾಸಾ.5 ರಿಂದ 7 ರವರು ಬಿಡಿಸಿದರು.

ಆನಂತರ ಚಾಸಾ.2 ರವರನ್ನು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಸೇರಿಸಿದೆವು. ಆನಂತರ ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಸೇರಿಸಿದೆವು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ದೂರು ಕೊಟ್ಟ ದಿನವೇ ಸಂಜೆ 5.00 ರಿಂದ 6.00 ಗಂಟೆ ಸಮಯಕ್ಕೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ.11 ಮತ್ತು 12 ರವರ ಸಮಕ್ಷಮ ಸ್ಥಳ ಪಂಚನಾಮೆ ಮಾಡಿ, ಬೇವಿನ ಚೆಕ್ಕೆ ಮಚ್ಚು ಮತ್ತು ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡರು. ಆ ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ದಿನ ಅಮಾನತ್ತುಪಡಿಸಿಕೊಂಡ ಬೇವಿನ ಚೆಕ್ಕೆ ಮಚ್ಚು ಮತ್ತು

ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಆ ಬೇವಿನ ಚೆಕ್ಕೆಯನ್ನು ಮು.ಮಾ.01 ಎಂದು, ದೊಣ್ಣೆಯನ್ನು ಮು.ಮಾ.02 ಮತ್ತು ಮಚ್ಚನ್ನು ಮು.ಮಾ.03 ಎಂದು ಗುರುತಿಸಲಾಯಿತು. ಆ ದಿನ ನಮ್ಮ ಜೊತೆ ಗಲಾಟೆ ಮಾಡಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರಾಗಿರುತ್ತಾರೆ.

**<u>ಪಾಟೀ ಸವಾಲುಃ</u>– ಆರೋಪಿತರ ಪರವಾಗಿ ಶ್ರೀ. ಪಿ.ಸಿ.ಕೆ.ಆರ್. ವಕೀಲರಿಂದಃ–**

ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂಬುದಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸರ್ವೆ ನಂಬರ್ 86/5 ರ ಆಸ್ತಿಯಲ್ಲಿ ಭಾಗ ಆಗಿರುತ್ತದೆ. ಈ ಬಗ್ಗೆ ವಿಭಾಗ ಪತ್ರ ಉಪನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಆಗಿರುತ್ತದೆ ಎಂದರೆ, ಸಾಕ್ಷಿಯು ಈ ಆಸ್ತಿಯಲ್ಲಿ ವಿಭಾಗ ಆಗಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಆ ವಿಭಾಗ ಪತ್ರಕ್ಕೆ ನಾನೂ ಸಹ ಸಹಿ ಮಾಡಿರುತ್ತೇನೆ. ಸರ್ವೆ ನಂಬರ್ 86/5 ರ ಆಸ್ತಿಯಲ್ಲಿ ನನಗಾಗಲೀ, ನನ್ನ ಮಕ್ಕಳಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. 1 ನೇ ಆರೋಪಿ ಮತ್ತು ಅವರ ಮಕ್ಕಳುಗಳು ನಮ್ಮ ಊರಿನಲ್ಲಿ ವಾಸವಾಗಿರುವುದಿಲ್ಲ ಎಂದರೆ ಸರಿ. ಅವರು ದೊಡ್ಡಚ್ಚಮ್ಮನಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಈ ಗಲಾಟೆಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಆ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಗಲಾಟೆ ಆಗುವುದಕ್ಕೂ ಮೊದಲು ನಾನು ಆರೋಪಿತರ ವಿರುದ್ಧ ಮಾನ್ಯ 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮಧುಗಿರಿಯಲ್ಲಿ

ಅಸಲು ದಾವಾ ಸಂಖ್ಯೆ 5006/2024 ರಂತೆ ದಾವೆ ಹಾಕಿದ್ದೆನು ಎಂದರೆ ಸರಿ. ಸದರಿ ದಾವಾ ಚಾಲ್ತಿಯಲ್ಲಿರುವಾಗಲೇ ಆರೋಪಿತರ ಮನೆಯ ಬಳಿ ಹೋಗಿ ನಾನು ಆರೋಪಿತರ ಜೊತೆ ಗಲಾಟೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಅಸಲು ದಾವಾ ಸಂಖ್ಯೆ 5006/2024 ಪ್ರಕರಣಕ್ಕೆ ನ್ಯಾಯಾಲಯಕ್ಕೆ ಬಂದ ಸಮಯದಲ್ಲಿಯೂ ಸಹ ನಾವುಗಳು ಗಲಾಟೆ ಮಾಡಿ ಆರೋಪಿತರಿಗೆ ಹಲ್ಲೆ ಮಾಡಿದ್ದೆವು ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 5006/2024 ರ ದಾವೆ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ಕಾರಣ ಆರೋಪಿತರ ವಿರುದ್ಧ ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಗಲಾಟೆ ಆದ ದಿನಾಂಕ ಮತ್ತು ಸಮಯ ನನಗೆ ಈಗ ಹೇಳಲು ಬರುವುದಿಲ್ಲ. ಆ ಗಲಾಟೆ ಮಧ್ಯಾಹ್ನ 2.00 ರಿಂದ 3.30 ಗಂಟೆಯವರೆಗೆ ಆಯಿತು. ಆ ದಿನ ಯಾವುದೇ ಆರೋಪಿತರು ನ್ಯಾಯಾಲಯದ ಮುಂದಿರುವ ಚೆಕ್ಕೆ, ದೊಣ್ಣೆ ಮತ್ತು ಮಚ್ಚಿನಿಂದ ಹಲ್ಲೆ ಮಾಡಿಲ್ಲ, ಈಗ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.01 ರಿಂದ 03 ನಮ್ಮ ಮನೆಯಲ್ಲಿದ್ದ ವಸ್ತುಗಳು ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ಯಾವುದೇ ಬೆಳೆ ಹಾಕದೇ ಬೀಳು ಬಿದ್ದಿತ್ತು. ಇದರಿಂದ ಚಾಸಾ.2 ರವರ ಷರ್ಟ್ ಗೆ ರಕ್ತ ಆಗಿತ್ತು. ಆ ಬಟ್ಟೆಯನ್ನು ನಾನೇ ಆಸ್ಪತ್ರೆಯ ಬಳಿ ಬಿಸಾಡಿದೆನು. ಆ ದಿನ ನಾನಾಗಲೀ ಇತರ ಸಾಕ್ಷಿದಾರರಾಗಲೀ ಆ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆ ಸ್ಥಳದಲ್ಲಿ ಸುಮಾರು ಒಂದೂವರೆ ಅಡಿ ಜಾಗದಲ್ಲಿ ರಕ್ತ ಬಿದ್ದಿತ್ತು. ಆ ದಿನ ನಮ್ಮ ಜಮೀನಿನಿಂದ ಆಸ್ಪತ್ರೆಗೆ

ಆಟೋದಲ್ಲಿ ಬಂದೆವು. ನಮ್ಮ ಊರಿನಿಂದ ಮಧುಗಿರಿ ಸುಮಾರು 35 ಕಿ.ಮೀ. ದೂರದಲ್ಲಿದೆ. ನಾವು ಆಸ್ಪತ್ರೆಗೆ ಬಂದಾಗ ಸಂಜೆ 5.00 ಗಂಟೆ ಸಮಯವಾಗಿತ್ತು. ನನ್ನ ಅಣ್ಣ ಚಾಸಾ.2 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು ಆದರೆ ನಾನು ಯಾವುದೇ ಚಿಕಿತ್ಸೆ ಪಡೆದಿರುವುದಿಲ್ಲ.

ಆ ದಿನ ಮಧುಗಿರಿ ಆಸ್ಪತ್ರೆಯ ವೈದ್ಯರು ನಮ್ಮನ್ನು ಒಳಗಡೆ ಬಿಟ್ಟುಕೊಂಡಿರುವುದಿಲ್ಲ. ಆಸ್ಪತ್ರೆಯ ಹೊರಗಿನಿಂದಲೇ ನಮ್ಮನ್ನು ಆಂಬುಲೆನ್ಸ್ ಮೂಲಕ ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದರು. ಈ ಗಲಾಟೆ ವಿಚಾರವನ್ನು ನಾವು ವೈದ್ಯರಿಗೆ ಹೇಳಿರುವುದಿಲ್ಲ. ಅದೇ ದಿನ ರಾತ್ರಿ 8.00 ಗಂಟೆ ಸಮಯದಕ್ಕೆ ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಹೋದೆವು. ಸುಮಾರು 15 ದಿನಗಳ ಕಾಲ ತುಮಕೂರಿನ ಜಿಲ್ಲಾ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಾಸಾ.2 ರವರಿಗೆ ಚಿಕಿತ್ಸೆ ಕೊಡಿಸಿದೆವು. ಚಾಸಾ.2 ರವರಿಗೆ ಆದ ಗಾಯಗಳು ಈ ಗಲಾಟೆಯಿಂದ ಆದ ಗಾಯಗಳಾಗಿರುವುದಿಲ್ಲ, ಮೊದಲೇ ಆಗಿದ್ದ ಗಾಯಗಳು ಎಂದರೆ ಸರಿಯಲ್ಲ. ಆ ದಿನ ಯಾವುದೇ ಗಲಾಟೆ ಆಗಿಲ್ಲ, ನಾನು ಮತ್ತು ಸಾಕ್ಷಿದಾರರು ಜೊತೆಯಾಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಚಾಸಾ.7 ರವರು ರಾಜಕೀಯ ವ್ಯಕ್ತಿ ಎಂದರೆ ಸರಿ. ಆ ರಾಜಕೀಯ ಪ್ರಭಾವ ಉಪಯೋಗಿಸಿಕೊಂಡು ಆರೋಪಿತರಿಂದ ಹಣ ಪಡೆಯುವ ಉದ್ದೇಶದಿಂದ ಈ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಕೊಡಿಗೇನಹಳ್ಳಿ ಸುಮಾರು 6 ಕಿ.ಮೀ. ದೂರದಲ್ಲಿದೆ. ಕೊಡಿಗೇನಹಳ್ಳಿಯಲ್ಲಿ ಆಸ್ಪತ್ರೆ ಇದೆ. ಆ ದಿನ ಕೊಡಿಗೇನಹಳ್ಳಿಗೆ ಹೋಗಲು

ದಾರಿ ಸರಿ ಇಲ್ಲದೇ ಇರುವುದರಿಂದ ಕೊಡಿಗೇನಹಳ್ಳಿ ಆಸ್ಪತ್ರೆಗೆ ಹೋಗಿರುವುದಿಲ್ಲ. ಆ ದಿನ ಸಮಯವಾದ ಕಾರಣ ಪೊಲೀಸರಿಗೆ ದೂರು ಕೊಟ್ಟಿರುವುದಿಲ್ಲ. ಗಲಾಟೆ ಆದ ಮರು ದಿನ ನಾನು ಪೊಲೀಸರಿಗೆ ದೂರು ಕೊಟ್ಟಿರುತ್ತೇನೆ. ಆದರೆ ಸಮಯ ನನಗೆ ಗೊತ್ತಿಲ್ಲ. ಸಾಕ್ಷಿಯು, ದೂರನ್ನು ಸಂಜೆ 5.30 ಗಂಟೆಗೆ ಕೊಟ್ಟಿರುತ್ತೇನೆ ಎಂದು ಸ್ವತಃ ನುಡಿಯುತ್ತಾರೆ.

ದೂರನ್ನು ಬೇರೆಯವರ ಮೂಲಕ ಬರೆಸಿರುತ್ತೇನೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಆ ದೂರಿನಲ್ಲಿ ಬರೆದಿರುವ ವಿಚಾರವನ್ನು ಅವರು ನನಗೆ ಓದಿ ತಿಳಿಸಿದರು. ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನನ್ನು ಪೊಲೀಸರು ಐದು ನಿಮಿಷಗಳ ಕಾಲ ವಿಚಾರಣೆ ಮಾಡಿದರು. ನಾನು ದೂರು ಕೊಟ್ಟ ಮರು ದಿನ ಪೊಲೀಸರು ಸ್ಥಳಕ್ಕೆ ಬಂದರು. ಪೊಲೀಸರು ಆ ಸ್ಥಳ ಪಂಚನಾಮೆಯನ್ನು ಪೊಲೀಸ್ ಠಾಣೆಯಲ್ಲಿ ಬೆರಳಚ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ.2 ರವರು ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ.2 ರವರು ಗೋಪಾಲಪುರದಲ್ಲಿ ವಾಸವಾಗಿರುತ್ತಾರೆ. ಅವರು ಟೈಲರಿಂಗ್ ಮತ್ತು ಪಂಕ್ಚರ್ ಹಾಕುವ ಕೆಲಸ ಮಾಡುತ್ತಾರೆ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ